# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 250 (287) |
| ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 14-09-2021 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ವಿವಿಧ ನಗರಾಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆಯೇ; (ಆ ಯೋಜನೆಗಳ ಸಂಪೂರ್ಣ ಮಾಹಿತಿ ನೀಡುವುದು) | **ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (ಕೆಯುಐಡಿಎಫ್‌ಸಿ):** |

ಭಾರತ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯವು 2015-16ನೇ ಸಾಲಿನಲ್ಲಿ ಸ್ಮಾರ್ಟ್ ಸಿಟಿಗಳ ಅಭಿಯಾನಕ್ಕೆ ಚಾಲನೆ ನೀಡಿರುತ್ತದೆ. ಈ ಯೋಜನೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶೇಕಡಾ 50:50 ಅನುಪಾತದಲ್ಲಿ ಪ್ರತಿ ನಗರಕ್ಕೆ ರೂ.1000.00 ಕೋಟಿ ಅನುದಾನವನ್ನು 5 ವರ್ಷಗಳಲ್ಲಿ ಬಿಡುಗಡೆ ಮಾಡಲಿದ್ದು, ಯೋಜನೆಯು ಪ್ರಸ್ತುತ ಪ್ರಗತಿಯಲ್ಲಿದೆ ಹಾಗೂ ಜೂನ್-2023 ಕ್ಕೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ.

ಸ್ಮಾರ್ಟ್‌ಸಿಟಿ ಅಭಿಯಾನದಡಿ ರಾಜ್ಯದಿಂದ 7 ನಗರಗಳಾದ ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಶಿವಮೊಗ್ಗ, ತುಮಕೂರು ಮತ್ತು ಬೆಂಗಳೂರು ನಗರಗಳು ಆಯ್ಕೆಯಾಗಿರುತ್ತವೆ.

ಪ್ರಸ್ತುತ 7 ನಗರಗಳಲ್ಲಿ ಸ್ಮಾರ್ಟ್ ಸಿಟಿ ಅನುದಾನ ಮತ್ತು ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿ (ಪಿಪಿಪಿ) ಕೈಗೊಂಡಿರುವ ಕಾಮಗಾರಿಗಳ ಭೌತಿಕ ಪ್ರಗತಿ ಈ ಕೆಳಕಂಡಂತಿದೆ;

**ಕೋಷ್ಟಕ -1 ಸ್ಮಾರ್ಟ್ ಸಿಟಿ ಅನುದಾನದಡಿ ಕೈಗೊಂಡ ಕಾಮಗಾರಿಗಳ ಭೌತಿಕ ಪ್ರಗತಿ**

| ಕಾಮಗಾರಿಗಳ ವಿವರ | ಕಾಮಗಾರಿಗಳ ಸಂಖ್ಯೆ | ಕಾಮಗಾರಿಗಳ ಮೊತ್ತ (ರೂ. ಕೋಟಿಗಳಲ್ಲಿ) |
|---|---|---|
| ಪೂರ್ಣಗೊಂಡ ಕಾಮಗಾರಿಗಳು | 258 | 920.05 |
| ಪ್ರಗತಿಯಲ್ಲಿರುವ ಕಾಮಗಾರಿಗಳು | 262 | 4697.04 |
| ಟೆಂಡರ್ ಹಂತದಲ್ಲಿರುವ ಕಾಮಗಾರಿಗಳು | 20 | 287.27 |
| ವಿಸ್ತೃತಾ ಯೋಜನಾ ವರದಿ ಹಂತದಲ್ಲಿರುವ ಕಾಮಗಾರಿಗಳು | 4 | 244.10 |
| ಒಟ್ಟು | **544** | **6148.46** |

**ಕೋಷ್ಟಕ -2 ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿ ಕೈಗೊಂಡ ಕಾಮಗಾರಿಗಳ ಭೌತಿಕ ಪ್ರಗತಿ**

| ಕಾಮಗಾರಿಗಳ ವಿವರ | ಕಾಮಗಾರಿಗಳ ಸಂಖ್ಯೆ | ಕಾಮಗಾರಿಗಳ ಮೊತ್ತ (ರೂ. ಕೋಟಿಗಳಲ್ಲಿ) |
|---|---|---|
| ಪೂರ್ಣಗೊಂಡ ಕಾಮಗಾರಿಗಳು | 2 | 2.82 |
| ಪ್ರಗತಿಯಲ್ಲಿರುವ ಕಾಮಗಾರಿಗಳು | 18 | 1570.36 |
| ಟೆಂಡರ್ ಹಂತದಲ್ಲಿರುವ ಕಾಮಗಾರಿಗಳು | 10 | 830.04 |
| ವಿಸ್ತೃತಾ ಯೋಜನಾ ವರದಿ ಹಂತದಲ್ಲಿರುವ ಕಾಮಗಾರಿಗಳು | 0 | 0 |

| | | |
|---|---|---|
| ಒಟ್ಟು | 30 | 2403.22 |

ಸ್ಮಾರ್ಟ್ ಸಿಟಿಗಳಿಗೆ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನ ಮತ್ತು ವೆಚ್ಚದ ವಿವರ ಕೆಳಕಂಡಂತಿದೆ;

(ರೂ. ಕೋಟಿಗಳು)

| ನಗರ | ಬಿಡುಗಡೆಯಾದ ಅನುದಾನ | | | ವೆಚ್ಚ | ವೆಚ್ಚದ ಶೇಕಡ |
|---|---|---|---|---|---|
| | ಕೇಂದ್ರ | ರಾಜ್ಯ | ಒಟ್ಟು | | |
| ಬೆಳಗಾವಿ | 294 | 300 | 594 | 536 | 90% |
| ದಾವಣಗೆರೆ | 245 | 249 | 494 | 426 | 86% |
| ಹುಬ್ಬಳ್ಳಿ-ಧಾರವಾಡ | 245 | 249 | 494 | 353 | 71% |
| ಮಂಗಳೂರು | 196 | 200 | 396 | 304 | 77% |
| ಶಿವಮೊಗ್ಗ | 245 | 249 | 494 | 369 | 75% |
| ತುಮಕೂರು | 294 | 297 | 591 | 495 | 84% |
| ಬೆಂಗಳೂರು. | 194 | 200 | 394 | 361 | 92% |
| **ಒಟ್ಟು** | **1713** | **1744** | **3457** | **2843** | **82%** |

## ಪೌರಾಡಳಿತ ನಿರ್ದೇಶನಾಲಯ:

ರಾಜ್ಯ ಸರ್ಕಾರವು ಅನುಷ್ಠಾನಿಸುತ್ತಿರುವ ಕೇಂದ್ರ ಸರ್ಕಾರದ ವಿವಿಧ ನಗರಾಭಿವೃದ್ಧಿ ಯೋಜನೆಗಳ ವಿವರ ಈ ಕೆಳಕಂಡಂತಿದೆ;

1) ಕೇಂದ್ರ ಪುರಸ್ಕೃತ ಅಮೃತ್ ಯೋಜನೆ
2) 14ನೇ ಹಣಕಾಸು ಆಯೋಗದ ಅನುದಾನ (2015-16 ರಿಂದ 2019-20)
3) 15ನೇ ಹಣಕಾಸು ಆಯೋಗದ ಅನುದಾನ (2020-21 ಮತ್ತು (2021-22 ರಿಂದ 2025-26)

1) **ಅಮೃತ್ ಯೋಜನೆ:** ಕೇಂದ್ರ ಸರ್ಕಾರದ ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯನ್ನು ರಾಜ್ಯದ 1 ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ 26 ನಗರಗಳಲ್ಲಿ ಮತ್ತು ಕೇಂದ್ರ ಸರ್ಕಾರದಿಂದ HRIDAY ಯೋಜನೆಯಡಿ ಪಾರಂಪರಿಕ ಪಟ್ಟಣವೆಂದು ವರ್ಗೀಕರಿಸಿದ ಬಾದಾಮಿ ಪಟ್ಟಣ ಸೇರಿ, ಒಟ್ಟು 27 ನಗರಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಯೋಜನೆಯ ಅನುದಾನದ ಅನುಪಾತ ಈ ಕೆಳಕಂಡಂತಿದೆ;

| **ನಗರ / ಪಟ್ಟಣ** | **ಕೇಂದ್ರದ ಪಾಲು** | **ರಾಜ್ಯದ ಪಾಲು** | **ನಗರ ಸ್ಥಳೀಯ ಸಂಸ್ಥೆಯ ಪಾಲು** | **ಒಟ್ಟು** |
|---|---|---|---|---|
| 26 ನಗರ ಸ್ಥಳೀಯ ಸಂಸ್ಥೆಗಳು | 50% | 20% | 30% | 100% |
| ಬೆಂಗಳೂರು | 33.33% | 20% | 46.67% | 100% |
| ಮೊತ್ತ (ರೂ. ಕೋಟಿಗಳಲ್ಲಿ) | 2318.79 | 990.58 | 1643.50 | 4952.87 |

ಸದರಿ ಯೋಜನೆಯಡಿ ಅಮೃತ್ ಯೋಜನೆಯ ಮಿಷನ್ ಅವಧಿಯಲ್ಲಿ ರಾಜ್ಯದ 5 ವರ್ಷಗಳ ವಾರ್ಷಿಕ ಕ್ರಿಯಾ ಯೋಜನೆ ಮೊತ್ತ ರೂ.4952.87 ಕೋಟಿಗಳು ಕೇಂದ್ರ ಸರ್ಕಾರದಿಂದ ಅನುಮೋದನೆಯಾಗಿರುತ್ತದೆ.

ಅಮೃತ್ ಯೋಜನೆಯಡಿ ಈ ಕೆಳಕಂಡ 5 ವಲಯಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ;

1. ನೀರು ಸರಬರಾಜು
2. ಒಳಚರಂಡಿ
3. ಮಳೆ ನೀರು ಚರಂಡಿ

4. ನಗರ ಸಾರಿಗೆ
5. ಹಸಿರು ಜಾಗ ಮತ್ತು ಉದ್ಯಾನವನ ಅಭಿವೃದ್ಧಿ

ಯೋಜನೆಯ ಅವಧಿಯು 5 ವರ್ಷಗಳಾಗಿದ್ದು, 2015-16 ನೇ ಸಾಲಿನಲ್ಲಿ ಪ್ರಾರಂಭವಾಗಿರುತ್ತದೆ. ಯೋಜನೆಯ ಮುಕ್ತಾಯ ಅವಧಿಯನ್ನು ಕೇಂದ್ರ ಸರ್ಕಾರವು ಮಾರ್ಚ್, 2022 ರವರೆಗೆ ವಿಸ್ತರಿಸಿದೆ.

ಯೋಜನೆಯಡಿ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರಗಳಿಂದ ಈತನಕ ಬಿಡುಗಡೆಯಾಗಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ;

(ರೂ. ಕೋಟಿಗಳಲ್ಲಿ)

| ಕೇಂದ್ರ | ರಾಜ್ಯ | ಒಟ್ಟು |
|---|---|---|
| 2300.58 | 895.10 | 3195.68 |

ಜುಲೈ 2021ರ ಅಂತ್ಯದ ವರೆಗೆ ರೂ.4053.42 ಕೋಟಿಗಳು ವೆಚ್ಚವಾಗಿದೆ. ಕೈಗೊಂಡ 401 ಕಾಮಗಾರಿಗಳಲ್ಲಿ 335 ಕಾಮಗಾರಿಗಳು ಪೂರ್ಣಗೊಂಡಿದೆ ಮತ್ತು 66 ಕಾಮಗಾರಿಗಳು ಪ್ರಗತಿಯಲ್ಲಿವೆ.

ಯೋಜನಾವಾರು ನಿಧಿ ಹಂಚಿಕೆ, ಬಿಡುಗಡೆಯಾದ ಅನುದಾನ, ವಲಯವಾರು ಹಂಚಿಕೆ ಮತ್ತು ಆರ್ಥಿಕ ಪ್ರಗತಿ ಹಾಗೂ ಕಾಮಗಾರಿಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಿದೆ.

**2) 14ನೇ ಹಣಕಾಸು ಆಯೋಗದ ಅನುದಾನ (2015-16 ರಿಂದ 2019-20):**

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ (ಬಿ.ಬಿ.ಎಂ.ಪಿ. ಒಳಗೊಂಡಂತೆ) ಕೇಂದ್ರ ಹಣಕಾಸು ಆಯೋಗದ 14ನೇ ಹಣಕಾಸು ಆಯೋಗವು 5 ವರ್ಷಗಳ ಅವಧಿಗೆ ಒಟ್ಟು ಅನುದಾನ ರೂ.5881.46 ಕೋಟಿ ಹಂಚಿಕೆ ಮಾಡಿ ಅನುದಾನ ರೂ.5195.939 ಕೋಟಿಗಳನ್ನು ಬಿಡುಗಡೆಗೊಳಿಸಿದೆ.

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ (ಬಿ.ಬಿ.ಎಂ.ಪಿ. ಹೊರತುಪಡಿಸಿ) ಅನುದಾನ ರೂ.3657.2535 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ.

ಸದರಿ ಅನುದಾನದಡಿ ನಗರ ಸ್ಥಳೀಯ ಸಂಸ್ಥೆಗಳು ನಗರ/ಪಟ್ಟಣದ ಅವಶ್ಯಕತೆಗನುಗುಣವಾಗಿ ಮತ್ತು ಅನುದಾನದ ಲಭ್ಯತೆಗನುಗುಣವಾಗಿ ಈ ಕೆಳಕಂಡ ವಲಯಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಮಾರ್ಗಸೂಚಿಯನ್ನು ಹೊರಡಿಸಿದೆ.

1. ಕುಡಿಯುವ ನೀರು ಕಾಮಗಾರಿಗಳು
2. ಸಾಮೂಹಿಕ/ಸಾರ್ವಜನಿಕ ಶೌಚಾಲಯ ಮತ್ತು ಸೆಪ್ಟೇಜ್‌ಗಳ ನಿರ್ವಹಣೆ
3. ಒಳಚರಂಡಿ ವ್ಯವಸ್ಥೆ ಕಾಮಗಾರಿಗಳು
4. ಘನತ್ಯಾಜ್ಯ ವಸ್ತು ನಿರ್ವಹಣೆ
5. ಮಳೆ ನೀರು ಚರಂಡಿ ಕಾಮಗಾರಿಗಳು
6. ಸಮುದಾಯ ಆಸ್ತಿಗಳ ನಿರ್ವಹಣೆ (ಪಾರ್ಕ್ ಒಳಗೊಂಡಂತೆ)
7. ರಸ್ತೆ ಮತ್ತು ಪಾದಾಚಾರಿ ಮಾರ್ಗಗಳ ನಿರ್ವಹಣೆ
8. ವಿದ್ಯುತ್ ಬೀದಿ ದೀಪಗಳ ಅಳವಡಿಕೆ/ನಿರ್ವಹಣೆ /ವಿದ್ಯುತ್ ಉಳಿತಾಯದ ಕ್ರಮಗಳು
9. ಸ್ಮಶಾನ/ ಚಿತಾಗಾರ ಅಭಿವೃದ್ಧಿ ಕಾಮಗಾರಿಗಳು.

**3) ಎ) 15ನೇ ಹಣಕಾಸು ಆಯೋಗದ ಅನುದಾನ: (2020-21)**

2020-21ನೇ ಸಾಲಿಗೆ ಕೇಂದ್ರ ಸರ್ಕಾರವು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ (ದಶಲಕ್ಷ ಜನಸಂಖ್ಯೆ ಅಲ್ಲದ ನಗರಗಳಿಗೆ) ಒಟ್ಟು ರೂ.991.00 ಕೋಟಿ ಅನುದಾನ ಹಂಚಿಕೆ ಮಾಡಿ ಬಿಡುಗಡೆಗೊಳಿಸಿದೆ. ಸದರಿ ಅನುದಾನವನ್ನು ಕೇಂದ್ರ ಸರ್ಕಾರವು 2 ಭಾಗಗಳಾಗಿ ವಿಂಗಡಿಸಿದ್ದು, ಶೇಕಡ 50 ರಷ್ಟು ಅನುದಾನವು ನಿರ್ಬಂಧಿತ ಅನುದಾನವಾಗಿದ್ದು, ನಿರ್ಬಂಧಿತ ಅನುದಾನವನ್ನು ಸಮಾನವಾಗಿ ಕುಡಿಯುವ ನೀರು ಸರಬರಾಜು ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಬಳಸಲು ಕಡ್ಡಾಯಗೊಳಿಸಿದೆ. ಉಳಿದ ಶೇಕಡ 50ರಷ್ಟು ಅನುದಾನ ಮುಕ್ತ (ಮೂಲ) ಅನುದಾನವಾಗಿದ್ದು, ಸದರಿ ಅನುದಾನವನ್ನು ನಗರ ಸ್ಥಳೀಯ ಸಂಸ್ಥೆಗಳ ಅವಶ್ಯಕತೆಗನುಗುಣವಾಗಿ ಈ ಕೆಳಕಂಡ ಮೂಲಭೂತ ಸೌಕರ್ಯಗಳಿಗೆ ಗರಿಷ್ಠ ಶೇಕಡ 20ರಷ್ಟು ಮೀರದಂತೆ ಬಳಸಲು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

1. ನೈರ್ಮಲ್ಯ ಮತ್ತು ಸೆಪ್ಟೇಜ್‌ಗಳ ನಿರ್ವಹಣೆ
2. ಒಳಚರಂಡಿ ವ್ಯವಸ್ಥೆಯ ಕಾಮಗಾರಿಗಳು
3. ಮಳೆ ನೀರು ಚರಂಡಿ
4. ರಸ್ತೆ ಮತ್ತು ಪಾದಚಾರಿ ಮಾರ್ಗಗಳು
5. ಬೀದಿ ದೀಪ / ವಿದ್ಯುತ್ ಉಳಿತಾಯ ಕ್ರಮಗಳು
6. ಉದ್ಯಾನವನ ಮತ್ತು ಹಸಿರು ಜಾಗ ಅಭಿವೃದ್ಧಿ
7. ಸ್ಮಶಾನ / ಚಿತಾಗಾರ

**3. ಬಿ) 15ನೇ ಹಣಕಾಸು ಆಯೋಗದ ಅನುದಾನ 2021-22 ರಿಂದ 2025-26:**

ಕೇಂದ್ರ ಹಣಕಾಸು ಆಯೋಗವು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ 5 ವರ್ಷಗಳ ಅವಧಿಗೆ ಅನುದಾನವನ್ನು ಈ ಕೆಳಕಂಡಂತೆ ಹಂಚಿಕೆ ಮಾಡಿದೆ;

**(ರೂ. ಕೋಟಿಗಳಲ್ಲಿ)**

| 2021-22 | 2022-23 | 2023-24 | 2024-25 | 2025-26 | ಒಟ್ಟು |
|---|---|---|---|---|---|
| 750.00 | 777.00 | 821.00 | 870.00 | 887.00 | 4105.00 |

ಸದರಿ ಅನುದಾನವನ್ನು ಕೇಂದ್ರ ಸರ್ಕಾರವು 2 ಭಾಗಗಳಾಗಿ ವಿಂಗಡಿಸಿದ್ದು, ಶೇಕಡ 60 ರಷ್ಟು ಅನುದಾನವು ನಿರ್ಬಂಧಿತ ಅನುದಾನವಾಗಿದ್ದು, ನಿರ್ಬಂಧಿತ ಅನುದಾನವನ್ನು ಸಮಾನವಾಗಿ ಕುಡಿಯುವ ನೀರು ಸರಬರಾಜು ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಬಳಸಲು ಕಡ್ಡಾಯಗೊಳಿಸಿದೆ. ಉಳಿದ ಶೇಕಡ 40 ರಷ್ಟು ಅನುದಾನ ಮುಕ್ತ (ಮೂಲ) ಅನುದಾನವಾಗಿದ್ದು, ಸದರಿ ಅನುದಾನವನ್ನು ನಗರ ಸ್ಥಳೀಯ ಸಂಸ್ಥೆಗಳ ಅವಶ್ಯಕತೆಗನುಗುಣವಾಗಿ ಈ ಕೆಳಕಂಡ ಮೂಲಭೂತ ಸೌಕರ್ಯಗಳಿಗೆ ಬಳಸಲು ಮಾರ್ಗಸೂಚಿಯನ್ನು ನೀಡಲಾಗಿದೆ:

1. ನೀರು ಸರಬರಾಜು (ಗೃಹ, ಕೈಗಾರಿಕೆ ಮತ್ತು ವಾಣಿಜ್ಯ ಬಳಕೆಗೆ)
2. ನೈರ್ಮಲ್ಯ, ಸೆಪ್ಟೇಜ್ ನಿರ್ವಹಣೆ ಹಾಗೂ ಘನತ್ಯಾಜ್ಯ ವಸ್ತು ನಿರ್ವಹಣೆ
3. ಒಳಚರಂಡಿ ವ್ಯವಸ್ಥೆ
4. ರಸ್ತೆ, ಸೇತುವೆ ಮತ್ತು ಪಾದಚಾರಿ ಮಾರ್ಗಗಳು
5. ಮಳೆ ನೀರು ಚರಂಡಿ

6. ಬೀದಿ ದೀಪ / ವಿದ್ಯುತ್ ಉಳಿತಾಯ ಕ್ರಮಗಳು
7. ಉದ್ಯಾನವನ ಮತ್ತು ಹಸಿರು ಜಾಗ ಮತ್ತು ಆಟದ ಮೈದಾನ ಅಭಿವೃದ್ಧಿ
8. ಸ್ಮಶಾನ / ಚಿತಾಗಾರ / ವಿದ್ಯುತ್ ಚಿತಾಗಾರ
9. ಸಾರ್ವಜನಿಕ ಸೌಲಭ್ಯಗಳಾದ ಬಸ್ ನಿಲ್ದಾಣ, ವಾಹನ ನಿಲುಗಡೆ ಸ್ಥಳ ಮತ್ತು ಶೌಚಾಲಯ
10. ನಗರ ಅರಣ್ಯ, ಪರಿಸರ ರಕ್ಷಣೆ ಮತ್ತು ಪರಿಸರ ಅಂಶಗಳ ಪ್ರಚಾರ ಅಭಿಯಾನ
11. ಕೊಳಗೇರಿ ಸುಧಾರಣೆ ಮತ್ತು ನವೀಕರಣ
12. ಅಂಗನವಾಡಿ ಕೇಂದ್ರ ಕಟ್ಟಡ ನಿರ್ಮಾಣ (ನೀರು ಸರಬರಾಜು ಸಂಪರ್ಕ ಮತ್ತು ಶೌಚಾಲಯದೊಂದಿಗೆ)
13. ನಗರ ಬಡತನ ನಿರ್ಮೂಲನೆ
14. ನಗರ ಯೋಜನೆ, Town planning ಒಳಗೊಂಡಂತೆ
15. ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಯೋಜನೆ

**ಸ್ವಚ್ಛ ಭಾರತ ಯೋಜನೆ:**

ಕೇಂದ್ರ ಸರ್ಕಾರದ ಸ್ವಚ್ಛ ಭಾರತ ಮಿಷನ್(ನಗರ) ಯೋಜನೆಯನ್ನು ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತದೆ.

ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಸ್ವಚ್ಛ ಭಾರತ್ ಯೋಜನೆಯನ್ನು ಕೇಂದ್ರ ಸರ್ಕಾರವು ಅಕ್ಟೋಬರ್ 02, 2014 ರಂದು ಜಾರಿಗೆ ತರಲಾಗಿರುತ್ತದೆ.

ಈ ಯೋಜನೆಯ ಪ್ರಮುಖ ಧ್ಯೇಯೋದ್ದೇಶವು ದೇಶದ ಪ್ರತಿಯೊಂದು ನಗರ ಹಾಗೂ ಪಟ್ಟಣ ಪ್ರದೇಶಗಳನ್ನು ಬಯಲು ಶೌಚಾಲಯ ಮುಕ್ತ ಪ್ರದೇಶಗಳನ್ನಾಗಿ ಮಾಡುವುದಾಗಿರುತ್ತದೆ. ಅದರಂತೆ, ವೈಯಕ್ತಿಕ ಶೌಚಾಲಯಗಳಿಲ್ಲದಿರುವ ಮನೆಗಳಿಗೆ ವೈಯಕ್ತಿಕ ಶೌಚಾಲಯಗಳು, ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲು ಜಾಗವಿಲ್ಲದ ಮನೆಗಳಿಗೆ ಸಮುದಾಯ ಶೌಚಾಲಯಗಳನ್ನು, ಪಟ್ಟಣಕ್ಕೆ ದಿನನಿತ್ಯ ಬಂದು ಹೋಗುವ ಜನರಿಗಾಗಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣವನ್ನು ಸದರಿ ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲಾಗಿರುತ್ತದೆ.

ಸ್ವಚ್ಛ ಭಾರತ್ ಯೋಜನೆಯು ಈ ಕೆಳಕಂಡ ಯೋಜನೆಗಳನ್ನು ಒಳಗೊಂಡಿರುತ್ತದೆ:

1. ವೈಯಕ್ತಿಕ ಶೌಚಾಲಯಗಳ ನಿರ್ಮಾಣ.
2. ಸಮುದಾಯ ಶೌಚಾಲಯಗಳ ನಿರ್ಮಾಣ.
3. ಸಾರ್ವಜನಿಕ ಶೌಚಾಲಯಗಳು.
4. ಘನತ್ಯಾಜ್ಯ ನಿರ್ವಹಣೆ.
5. ಸಾರ್ವಜನಿಕರಲ್ಲಿ ತಿಳುವಳಿಕೆ ಹಾಗು ಅರಿವು ಮೂಡಿಸುವುದು.
6. ಬಲವರ್ಧನೆ ಹಾಗೂ ಆಡಳಿತ & ಕಛೇರಿ ವೆಚ್ಚಗಳು.

ಆ) ಈ ಯೋಜನೆಗಳ ಅಡಿಯಲ್ಲಿ ಕಳೆದ 3 ವರ್ಷಗಳಲ್ಲಿ ಮತ್ತು ಪ್ರಸ್ತುತ ವರ್ಷದಲ್ಲಿ ಕೇಂದ್ರ ಸರ್ಕಾರದಿಂದ ದೊರೆತಿರುವ ಅನುದಾನವೆಷ್ಟು ಮತ್ತು ಸದ್ಬಳಕೆಯಾದ ಅನುದಾನ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು;

**ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (ಕೆಯುಐಡಿಎಫ್‌ಸಿ):**

ಸ್ಮಾರ್ಟ್ ಸಿಟಿ ಅಭಿಯಾನಡಿ ಕಳೆದ 3 ವರ್ಷಗಳಲ್ಲಿ ಮತ್ತು ಪ್ರಸ್ತುತ ವರ್ಷದಲ್ಲಿ ಕೇಂದ್ರ ಸರ್ಕಾರದಿಂದ ದೊರೆತಿರುವ ಅನುದಾನ ಮತ್ತು ಸದ್ಬಳಕೆಗಳ ವಿವರ ಕೆಳಕಂಡಂತಿದೆ;

| ವರ್ಷ | ವಿವರ | ಬೆಳಗಾವಿ | ದಾವಣಗೆರೆ | ಹುಬ್ಬಳ್ಳಿ-ಧಾರವಾಡ | ಮಂಗಳೂರು | ಶಿವಮೊಗ್ಗ | ತುಮಕೂರು | ಬೆಂಗಳೂರು |
|---|---|---|---|---|---|---|---|---|
| 2018-19 | ಬಿಡುಗಡೆ | 0 | 0 | 79 | 0 | 0 | 0 | 55 |
| | ವೆಚ್ಚ | 18.94 | 37.16 | 11.19 | 7.57 | 12.22 | 24.13 | 4.96 |
| 2019-20 | ಬಿಡುಗಡೆ | 0 | 0 | 6 | 79 | 85 | 85 | 100 |
| | ವೆಚ್ಚ | 172.33 | 134.84 | 84.03 | 51.79 | 100.06 | 166.92 | 9.24 |
| 2020-21 | ಬಿಡುಗಡೆ | 98 | 0 | 0 | 6 | 0 | 98 | 39 |
| | ವೆಚ್ಚ | 102.73 | 24.00 | 100.78 | 136.64 | 83.71 | 102.95 | 164 57 |
| 2021-22 | ಬಿಡುಗಡೆ | 0 | 49 | 0 | 0 | 49 | 0 | 0 |
| | ವೆಚ್ಚ | 0 | 38.05 | 0 | 0 | 21.07 | 0 | 13.72 |
| ಒಟ್ಟು | **ಬಿಡುಗಡೆ** | **98** | **49** | **85** | **85** | **134** | **183** | **194** |
| | **ವೆಚ್ಚ** | **294** | **234.05** | **196** | **196** | **217.06** | **294** | **192.49** |

**ಪೌರಾಡಳಿತ ನಿರ್ದೇಶನಾಲಯ:**

ಕಳೆದ 3 ವರ್ಷಗಳಲ್ಲಿ ಮತ್ತು ಪ್ರಸ್ತುತ ವರ್ಷದಲ್ಲಿ ಕೇಂದ್ರ ಸರ್ಕಾರದಿಂದ ದೊರೆತಿರುವ ಅನುದಾನ ಮತ್ತು ಸದ್ಬಳಕೆಯಾದ ಅನುದಾನದ ವಿವರಗಳು ಈ ಕೆಳಕಂಡಂತಿದೆ;

**14ನೇ ಹಣಕಾಸು ಯೋಜನೆ:-**

(ರೂ. ಕೋಟಿಗಳಲ್ಲಿ)

| ವರ್ಷ | 14ನೇ ಹಣಕಾಸು ಆಯೋಗದ ಅನುದಾನ | ವೆಚ್ಚ |
|---|---|---|
| 2018-19 | 738.54 | 604.03 |
| 2019-20 | 1173.93 | 729.59 |
| 2020-21 | - | - |
| **ಒಟ್ಟು** | **1912.47** | **1333.62** |

**15ನೇ ಹಣಕಾಸು ಯೋಜನೆ:-**

(ರೂ. ಕೋಟಿಗಳಲ್ಲಿ)

| ವರ್ಷ | 15ನೇ ಹಣಕಾಸು ಆಯೋಗದ ಅನುದಾನ | ವೆಚ್ಚ |
|---|---|---|
| 2019-20 | - | - |
| 2020-21 | 991.00 | 150.00 |
| 2021-22 | 249.20 | - |
| **ಒಟ್ಟು** | **1240.20** | **150.00** |

**ಅಮೃತ್ ಯೋಜನೆ:-**

(ರೂ. ಕೋಟಿಗಳಲ್ಲಿ)

| ವರ್ಷ | ಅಮೃತ್ ಯೋಜನೆ ಅನುದಾನ | ವೆಚ್ಚ |
|---|---|---|
| 2018-19 | 648.57 | 648.57 |
| 2019-20 | 768.99 | 768.99 |
| 2020-21 | 299.23 | 299.23 |
| 2021-22 | 135.07 | 0 |
| **ಒಟ್ಟು** | **1851.86** | **1716.79** |

**ಸ್ವಚ್ಛ ಭಾರತ ಮಿಷನ್(ನಗರ):-**

ಸ್ವಚ್ಛ ಭಾರತ ಮಿಷನ್(ನಗರ) ಯೋಜನೆಯಡಿಯಲ್ಲಿ ಬಿಡುಗಡೆಯಾದ ಮತ್ತು ವೆಚ್ಚವಾದ ಸಂಪೂರ್ಣ ಮಾಹಿತಿ ಈ ಕೆಳಕಂಡಂತಿದೆ:

(ರೂ ಕೋಟಿಗಳಲ್ಲಿ)

| **ವರ್ಷ** | **ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ** | **ವೆಚ್ಚ** |
|---|---|---|
| 2018-19 | 239.82 | 37.61 |
| 2019-20 | 72.90 | 45.35 |
| 2020-21 | 0.00 | 238.33 |
| 2021-22 | 199.01 | 54.37 |
| **ಒಟ್ಟು** | **511.73** | **375.66** |

ಇ) ಕೇಂದ್ರ ಸರ್ಕಾರದ ಈ ಮಹತ್ವಾಕಾಂಕ್ಷೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸ್ಥಳೀಯ ನಗರ ಸಂಸ್ಥೆಗಳಲ್ಲಿ ನೌಕರ ವರ್ಗದ ಸಾಮರ್ಥ್ಯ ಬಲಪಡಿಸಲು ಮತ್ತು ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಸದ್ಬಳಕೆ ಮಾಡಲು ಯಾವ ವ್ಯವಸ್ಥೆಗಳನ್ನು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಮಾಡಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು)

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಸ್ಮಾರ್ಟ್ ಸಿಟಿ ಅಭಿಯಾನದಡಿ ಅಭಿಯಾನವನ್ನು ಅನುಷ್ಠಾನಗೊಳಿಸಲು ಕಂಪನಿ ಕಾಯ್ದೆಯಡಿಯಲ್ಲಿ ವಿಶೇಷ ಉದ್ದೇಶಿತ ವಾಹನಗಳನ್ನು ಸ್ಥಾಪಿಸಲಾಗಿದೆ ಹಾಗೂ ಸ್ಮಾರ್ಟ್ ಸಿಟಿ ಲಿಮಿಟೆಡ್ ಕಂಪನಿಯ ಸಮರ್ಪಕ ಕಾರ್ಯನಿರ್ವಹಣೆಗಾಗಿ ನಿರ್ದೇಶಕರ ಮಂಡಳಿಯನ್ನು ರಚಿಸಲಾಗಿದೆ. ನಿರ್ದೇಶಕರ ಮಂಡಳಿಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುತ್ತಾರೆ. ಸದಸ್ಯರಾಗಿ ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾಧಿಕಾರಿಗಳು, ಮಹಾನಗರ ಪಾಲಿಕೆಯಿಂದ ಆಯುಕ್ತರು, ಮಹಾಪೌರರು ಹಾಗೂ ಪಾಲಿಕೆ ಸದಸ್ಯರುಗಳು ಇರುತ್ತಾರೆ. ಇದಲ್ಲದೇ ಕೇಂದ್ರ ಸರ್ಕಾರದ ಪ್ರತಿನಿಧಿ ಹಾಗೂ ರಾಜ್ಯ ಮಟ್ಟದ ಪಾಲುದಾರ ಸಂಸ್ಥೆಗಳ ಮುಖ್ಯಸ್ಥರು ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಾರೆ.

ಸ್ಮಾರ್ಟ್ ಸಿಟಿ ಲಿಮಿಟೆಡ್ ಕಂಪನಿಗೆ ಪೂರ್ಣಕಾಲಿಕ ವ್ಯವಸ್ಥಾಪಕ ನಿರ್ದೇಶಕರು, ಮುಖ್ಯ ಇಂಜಿನಿಯರ್ ಸೇರಿದಂತೆ ತಾಂತ್ರಿಕ, ಆಡಳಿತ ಹಾಗೂ ಲೆಕ್ಕ ಪತ್ರ ವಿಭಾಗದಲ್ಲಿ ಅವಶ್ಯಕ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ನೇಮಿಸಲಾಗಿದ್ದು, ಈ ಎಲ್ಲಾ ಅಧಿಕಾರಿ ಮತ್ತು ನೌಕರರ ವರ್ಗಕ್ಕೆ ಸಾಮರ್ಥ್ಯ ಬಲಪಡಿಸಲು ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರಿನಲ್ಲಿ ವಿವಿಧ ವಿಷಯಗಳಲ್ಲಿ ತರಬೇತಿ ನೀಡಲಾಗಿರುತ್ತದೆ ಹಾಗೂ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಇತರೆ ತರಬೇತಿ ಸಂಸ್ಥೆಗಳಲ್ಲಿ ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸಲು ಕಾಲಾನುಕಾಲಕ್ಕೆ ನಿಯೋಜಿಸಲಾಗುತ್ತಿದೆ.

**ಸ್ಮಾರ್ಟ್ ಸಿಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಸದ್ಬಳಕೆ ಮಾಡಲು ಈ ಕೆಳಕಂಡ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ;**

- ರಾಜ್ಯದಲ್ಲಿ ಸ್ಮಾರ್ಟ್ ಸಿಟಿ ಅಭಿಯಾನದ ಅನುಷ್ಠಾನಕ್ಕೆ ಕರ್ನಾಟಕ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ – ಕೆ.ಯು.ಐ.ಡಿ.ಎಫ್.ಸಿ ಸಂಸ್ಥೆಯು ರಾಜ್ಯ ಮಟ್ಟದ '**ನೋಡಲ್ ಏಜೆನ್ಸಿ**' ಯಾಗಿ ಕಾರ್ಯನಿರ್ವಹಿಸುತ್ತಿರುತ್ತದೆ.
- ಮಾರ್ಗಸೂಚಿಯನ್ವಯ ಎಲ್ಲಾ ನಗರಗಳಲ್ಲಿ ಮಾನ್ಯ ಸಂಸತ್ ಸದಸ್ಯರು, ಮಾನ್ಯ ವಿಧಾನ ಸಭಾ ಸದಸ್ಯರು, ಪೂಜ್ಯ ಮಹಾಪೌರರು, ಜಿಲ್ಲಾಧಿಕಾರಿಗಳು, ವ್ಯವಸ್ಥಾಪಕ ನಿರ್ದೇಶಕರು ಸ್ಮಾರ್ಟ್ ಸಿಟಿ ಲಿಮಿಟೆಡ್, ತಾಂತ್ರಿಕ ತಜ್ಞರು, ವಾಣಿಜ್ಯ ಮಂಡಳಿಯ ಸದಸ್ಯರು, ಸ್ವಯಂ ಸೇವಾ ಸಂಸ್ಥೆ ಸದಸ್ಯರು ಹಾಗೂ ಇತರೆ ಸಮುದಾಯ ಆಧಾರಿತ ಸಂಸ್ಥೆಗಳ ಪ್ರತಿನಿಧಿಗಳು ಒಳಗೊಂಡಿರುವ "**ಸ್ಮಾರ್ಟ್ ಸಿಟಿ ಅಡ್ವೈಸರಿ ಫೋರಂ**"ನ್ನು ಸ್ಥಾಪಿಸಲಾಗಿದೆ. ಎಲ್ಲಾ ನಗರಗಳಲ್ಲಿಯೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ಈ ಸಮಿತಿಯು

ನಿಯಮಿತವಾಗಿ ಸಭೆಗಳನ್ನು ನಡೆಸಿ ಯೋಜನೆಗಳ ಅನುಷ್ಠಾನ ಹಾಗೂ ಸಮಸ್ಯೆಗಳ ಬಗ್ಗೆ ಮಾರ್ಗದರ್ಶನ ನೀಡುತ್ತಿವೆ.

- ಮುಂದುವರೆದಂತೆ, ಯೋಜನಾ ಅನುಷ್ಠಾನದಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಲು ವಿಶೇಷ ಉದ್ದೇಶಿತ ವಾಹನಗಳಿಗೆ ಮಾರ್ಗದರ್ಶನ ಮತ್ತು ಕಾರ್ಯಚಟುವಟಿಕೆಗಳ ಮೇಲುಸ್ತುವಾರಿಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ "**ಸ್ಮಾರ್ಟ್ ಸಿಟಿ ಅನುಷ್ಠಾನ ಮತ್ತು ಪರಿಶೀಲನಾ ಸಮಿತಿ**" ಯನ್ನು ನಗರ ಮಟ್ಟದಲ್ಲಿ ರಚಿಸಲಾಗಿದೆ. ಈ ಸಮಿತಿಗೆ ಜಿಲ್ಲಾ ಉಸ್ತುವಾರಿ ಸಚಿವರು ಸಹ-ಅಧ್ಯಕ್ಷರಾಗಿದ್ದು, ಮಾನ್ಯ ಲೋಕಸಭಾ ಸದಸ್ಯರುಗಳು, ಮಾನ್ಯ ವಿಧಾನಸಭಾ ಸದಸ್ಯರುಗಳು ಸಮಿತಿಯ ಸದಸ್ಯರಾಗಿದ್ದು, ಕಾಲಕಾಲಕ್ಕೆ ಸಭೆಗಳನ್ನು ನಡೆಸಲಾಗುತ್ತಿದೆ.
- ನಗರಗಳು ಸಿದ್ಧಪಡಿಸಿರುವ ಕಾಮಗಾರಿಗಳ ವಿಸ್ತೃತ ಯೋಜನಾ ವರದಿಗಳಿಗೆ ತಾಂತ್ರಿಕ ಅನುಮೋದನೆ ನೀಡಲು ರಾಜ್ಯ ಮಟ್ಟದ ಉಸ್ತುವಾರಿ ಸಂಸ್ಥೆಯಾದ ಕೆಯುಐಡಿಎಫ್‌ಸಿ ಯಲ್ಲಿ, ಬಾಹ್ಯ ಪರಿಣಿತ ಸದಸ್ಯರನ್ನು ಒಳಗೊಂಡ ತಾಂತ್ರಿಕ ಸಮಿತಿಗಳನ್ನು ರಚಿಸಲಾಗಿದೆ.
- ನಗರಗಳಲ್ಲಿ ಸ್ಥಾಪಿತವಾಗಿರುವ ವಿಶೇಷ ಉದ್ದೇಶಿತ ವಾಹನಗಳ ಮಾರ್ಗದರ್ಶನಕ್ಕಾಗಿ ಮತ್ತು ಮೇಲುಸ್ತುವಾರಿಗಾಗಿ ರಾಜ್ಯ ಮಟ್ಟದಲ್ಲಿ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ '**ರಾಜ್ಯ ಮಟ್ಟದ ಉನ್ನತ ಅಧಿಕಾರಿಯುತ ಸಂಚಾಲನ ಸಮಿತಿ**'ಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯು ನಿಯಮಿತವಾಗಿ ಸಭೆಗಳನ್ನು ನಡೆಸಿ ಮಾರ್ಗದರ್ಶನ ನೀಡುತ್ತಿರುತ್ತದೆ.

ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ವ್ಯವಸ್ಥಾಪಕರು ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ ಇವರುಗಳ ನೇತೃತ್ವದಲ್ಲಿ ನಿಯಮಿತವಾಗಿ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲಾಗುತ್ತಿದೆ.

**ಪೌರಾಡಳಿತ ನಿರ್ದೇಶನಾಲಯ:**

ಕೇಂದ್ರ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸಲು ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೌಕರ ವರ್ಗದ ಸಾಮರ್ಥ್ಯ ಬಲಪಡಿಸಲು ಮತ್ತು ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಸದ್ಬಳಕೆ ಮಾಡಿರುವ ವಿವರ ಈ ಕೆಳಕಂಡಂತಿರುತ್ತದೆ.

**ಕೇಂದ್ರ ಪುರಸ್ಕೃತ ಅಮೃತ್ ಯೋಜನೆ:-**

ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯನ್ನು ಅನುಷ್ಠಾನಿಸಲು ನೌಕರ ವರ್ಗದ ಸಾಮರ್ಥ್ಯವನ್ನು ಬಲಪಡಿಸಲು ಯೋಜನೆಯಡಿ ರಾಜ್ಯ ನಗರಾಭಿವೃದ್ಧಿ ಸಂಸ್ಥೆ (SIUD) ಮತ್ತು IHSS ಮೂಲಕ ನಗರಗಳ ಸಿಬ್ಬಂದಿಗಳಿಗೆ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತರಬೇತಿ ನೀಡಲಾಗಿದೆ. ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಸದ್ಬಳಕೆ ಮಾಡಲು ರಾಜ್ಯ ಮಟ್ಟದಲ್ಲಿ ಸರ್ಕಾರದಿಂದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಉನ್ನತಮಟ್ಟದ ಸಂಚಾಲನಾ ಸಮಿತಿಯನ್ನು (SHPSC) ರಚಿಸಲಾಗಿದೆ. ಸದರಿ ಸಮಿತಿಯು ಅಮೃತ್ ಯೋಜನೆಯ ಅನುದಾನ ಬಳಕೆಯ ಬಗ್ಗೆ ಮತ್ತು ಯೋಜನೆಯ ಪ್ರಗತಿಯ ಬಗ್ಗೆ ಕಾಲಕಾಲಕ್ಕೆ ಪರಿಶೀಲಿಸುತ್ತಿದೆ ಹಾಗು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯನ್ನು (SLTC) ರಚಿಸಲಾಗಿದೆ ಮತ್ತು ಪೌರಾಡಳಿತ ನಿರ್ದೇಶನಾಲಯದಲ್ಲಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

| | | |
|---|---|---|
| | | ಸದರಿ ಸಮಿತಿಗಳು ನಗರ ಸ್ಥಳೀಯ ಸಂಸ್ಥೆಗಳು / ಅನುಷ್ಠಾನ ಸಂಸ್ಥೆಗಳು ತಯಾರಿಸುವ ವಿಸ್ತೃತ ಯೋಜನಾ ವರದಿಯನ್ನು ತಾಂತ್ರಿಕವಾಗಿ ಪರಿಶೀಲಿಸಿ ಅನುಮೋದನೆ ನೀಡುತ್ತಿವೆ ಹಾಗೂ ಯೋಜನೆಯ ಅನುಷ್ಠಾನಕ್ಕೆ ರಾಜ್ಯ ಮಟ್ಟದಲ್ಲಿ Project Development and Management Consultant (PDMC) ಯನ್ನು ಯೋಜನೆಯ ಮಾರ್ಗಸೂಚಿಯನ್ವಯ ನೇಮಿಸಲಾಗಿದೆ ಮತ್ತು ರಾಜ್ಯ ಅಭಿಯಾನ ನಿರ್ವಹಣೆಯ ಘಟಕವನ್ನು ಸ್ಥಾಪಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲೆಯ ಮಾನ್ಯ ಸಂಸದರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳು, ಚುನಾವಣಾ ಪ್ರತಿನಿಧಿಗಳನ್ನು ಒಳಗೊಂಡಂತೆ ಜಿಲ್ಲಾ ಮಟ್ಟದ ಸಲಹಾ ಮತ್ತು ಉಸ್ತುವಾರಿ ಸಮಿತಿ (District Level Advisory and Monitoring Committee-DLAMC) ಯನ್ನು ರಚಿಸಲಾಗಿದೆ. ಕಾಮಗಾರಿಗಳ ಗುಣಮಟ್ಟವನ್ನು ಪರಿಶೀಲಿಸಲು ಕೇಂದ್ರ ಸರ್ಕಾರವು Independent Review and Monitoring Agency (IRMA) ಯನ್ನು ನೇಮಿಸಿದೆ. ಸದರಿ ಸಮಿತಿಯು ಅಮೃತ್ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ಪರಿಶೀಲನೆ, ವಿವಿಧ ಸಂಸ್ಥೆಗಳೊಂದಿಗೆ ಸಮನ್ವಯ ಇತ್ಯಾದಿಗಳನ್ನು ಕಾಲಕಾಲಕ್ಕೆ ಮಾಡುತ್ತಿದೆ.<br><br>**ಸ್ವಚ್ಛ ಭಾರತ್ ಯೋಜನೆ:-**<br>ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೌಕರ ವರ್ಗದ ಸಾಮರ್ಥ್ಯ ಬಲಪಡಿಸಲು ಅಂದರೆ ನೌಕರರಿಗೆ ಸ್ವಚ್ಛ ಭಾರತ ಯೋಜನೆಯ ಕುರಿತು ತರಬೇತಿಗಳನ್ನು ನೀಡಲು ಕೇಂದ್ರ ಸರ್ಕಾರದಿಂದ ರೂ.17.62 ಕೋಟಿಗಳ ಅನುದಾನ ಬಿಡುಗಡೆಯಾಗಿದ್ದು ಇದರ ಪೈಕಿ ರೂ.13.04 ಕೋಟಿಗಳ ಅನುದಾನವನ್ನು ವೆಚ್ಚ ಮಾಡಲಾಗಿರುತ್ತದೆ. |

ಸಂಖ್ಯೆ:ನಲಅಇ 154 ಸಿಎಸ್‌ಎಸ್ 2021

N. Nagaraju

**(ಎನ್. ನಾಗರಾಜು (ಎಂ.ಟಿ.ಬಿ))**
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

# ಯೋಜನಾವಾರು ನಿಧಿ ಹಂಚಿಕೆ ಹಾಗೂ ಬಿಡುಗಡೆಯಾದ ಅನುದಾನದ ವಿವರ

*ಮೊತ್ತ ರೂ.ಕೋಟಿಗಳಲ್ಲಿ*

## ವಲಯವಾರು ಹಂಚಿಕೆಯಾದ ಅನುದಾನ

| ವಲಯ | ಕಾಮಗಾರಿಗಳ ಸಂಖ್ಯೆ | ಮೊತ್ತ ರೂ. ಕೋಟಿಗಳಲ್ಲಿ | ಶೇಕಡವಾರು ಹಂಚಿಕೆ | ನಗರಗಳ ಸಂಖ್ಯೆ |
|---|---|---|---|---|
| ನೀರು ಸರಬರಾಜು | 43 | 2158.18 | 42.54 | 24 |
| ಒಳಚರಂಡಿ ಹಾಗೂ ಸೆಪ್ಟೇಜ್ ನಿರ್ವಹಣೆ | 50 | 2373.24 | 49.05 | 22 |
| ಮಳೆ ನೀರು ಚರಂಡಿ | 84 | 254.02 | 5.04 | 13 |
| ಹಸಿರು ಜಾಗ ಮತ್ತು ಉದ್ಯಾನವನ | 181 | 117.18 | 2.23 | 27 |
| ನಗರ ಸಾರಿಗೆ | 43 | 50.21 | 1.13 | 8 |
| ಒಟ್ಟು = | 401 | 4952.87 | 100 | |

## ಅನುಷ್ಠಾನ ಸಂಸ್ಥೆವಾರು ಬಿಡುಗಡೆಯಾದ ಅನುದಾನ

| ಕ್ರ.ಸಂ | ಅನುಷ್ಠಾನ ಸಂಸ್ಥೆ | ಬಿಡುಗಡೆಯಾದ ಯೋಜನಾ ನಿಧಿ | | | ವೆಚ್ಚವಾದ ಒಟ್ಟು ಮೊತ್ತ (ಜುಲೈ-2021 ಅಂತ್ಯಕ್ಕೆ) | ಅನುದಾನ ಸಂಸ್ಥೆಗಳಿಂದ ಸಲ್ಲಿಕೆಯಾಗಿರುವ ಹಣಬಳಕೆ ಪ್ರಮಾಣ ಪತ್ರ |
|---|---|---|---|---|---|---|
| | | ಕೇಂದ್ರ & ರಾಜ್ಯ | ನ.ಸ್ಥ.ಸಂ | ಒಟ್ಟು | | |
| 1 | ಕ.ನ.ನೀ.ಸ ಮತ್ತು ಒಳಚರಂಡಿ ಮಂಡಳಿ | 1864.31 | 688.99 | 2553.3 | 2465.86 | 2433.64 |
| 2 | ಬೆಂಗಳೂರು ಜಲ ಮಂಡಳಿ | 489.22 | 428.97 | 918.19 | 955.84 | 955.84 |
| 3 | ಕೆ.ಯು.ಐ.ಡಿ.ಎಫ್.ಸಿ | 257.24 | 117.05 | 374.29 | 320.27 | 320.27 |
| 4 | ಬಿ.ಬಿ.ಎಂ.ಪಿ | 8.82 | 8.83 | 17.65 | 16.91 | 14.02 |
| 5 | 26 ನ.ಸ್ಥ.ಸಂ | 218.17 | 93.945 | 312.11 | 294.52 | 285.86 |
| | ಒಟ್ಟು: | 2837.76 | 1337.79 | 4175.54 | 4053.4 | 4009.63 |

## ಬಿಡುಗಡೆಯಾದ ಅನುದಾನ

| ಕಂತು | ಕೇಂದ್ರ | ರಾಜ್ಯ | ನ.ಸ್ಥ.ಸಂ. | ಒಟ್ಟು | ಶೇಕಡಾವಾರು |
|---|---|---|---|---|---|
| I | 463.76 | 198.11 | 328.70 | 990.57 | 100% |
| II | 927.52 | 396.23 | 657.40 | 1981.15 | 100% |
| III | 909.3 | 300.76 | 351.69 | 1561.75 | 79% |
| ಒಟ್ಟು = | 2300.58 | 895.10 | 1337.79 | 4533.47 | |

## ಬಿಡುಗಡೆಗೊಳಿಸಲು ಬಾಕಿ ಇರುವ ಅನುದಾನ

| ಕಂತು | ಕೇಂದ್ರ | ರಾಜ್ಯ | ನ.ಸ್ಥ.ಸಂ | ಒಟ್ಟು |
|---|---|---|---|---|
| III | 0 | 87.42 | 291.73 | 379.14 |

## ವಲಯವಾರು ಹಂಚಿಕೆ ಮತ್ತು ಆರ್ಥಿಕ ಪ್ರಗತಿ (ಜುಲೈ 2021ರ ಅಂತ್ಯಕ್ಕೆ)

*ರೂ. ಕೋಟಿಗಳಲ್ಲಿ*

| ಕ್ರ.ಸಂ | ನಗರಗಳು | ವಲಯವಾರು ಹಂಚಿಕೆ | | | | | ಒಟ್ಟು ಹಂಚಿಕೆ | ಒಟ್ಟು ವೆಚ್ಚ ಜುಲೈ 2021ರ ಅಂತ್ಯಕ್ಕೆ | ಆರ್ಥಿಕ ಪ್ರಗತಿ % |
|---|---|---|---|---|---|---|---|---|---|
| | | ನೀರು ಸರಬರಾಜು | ಒಳಚರಂಡಿ | ಮಳೆ ನೀರು ಚರಂಡಿ | ಹಸಿರುಭಾಗ ಮತ್ತು ಉದ್ಯಾನವನ ಅಭಿವೃದ್ಧಿ | ನಗರಸಾರಿಗೆ | | | |
| 1 | ಕಲಬುರ್ಗಿ | 12.35 | 156.80 | 0.00 | 3.20 | 0.00 | 172.36 | 171.35 | 99.41% |
| 2 | ಹುಬ್ಬಳ್ಳಿ - ಧಾರವಾಡ | 0.00 | 172.76 | 0.00 | 4.00 | 0.00 | 176.76 | 165.2 | 93.46% |
| 3 | ವಿಜಯಪುರ | 177.98 | 0.00 | 0.00 | 4.00 | 0.00 | 181.98 | 165.96 | 91.20% |
| 4 | ತುಮಕೂರು | 113.16 | 39.27 | 2.50 | 4.00 | 20.00 | 178.93 | 153.06 | 85.54% |
| 5 | ಬಳ್ಳಾರಿ | 70.00 | 108.44 | 0.00 | 2.25 | 0.00 | 180.69 | 154.38 | 85.44% |
| 6 | ಮೈಸೂರು | 167.07 | 18.87 | 0.00 | 4.00 | 0.00 | 189.94 | 158.93 | 83.67% |
| 7 | ಶಿವಮೊಗ್ಗ | 42.00 | 65.00 | 69.82 | 4.00 | 0.00 | 180.83 | 144.18 | 79.73% |
| 8 | ಮಂಗಳೂರು | 32.51 | 147.01 | 3.99 | 2.00 | 0.00 | 185.52 | 90.64 | 48.86% |
| 9 | ಬೆಳಗಾವಿ | 19.38 | 156.00 | 0.00 | 4.00 | 0.00 | 179.38 | 64.21 | 35.80% |
| 10 | ದಾವಣಗೆರೆ | 174.96 | 0.00 | 0.00 | 5.00 | 0.00 | 179.96 | 38.27 | 21.27% |
| | ಒಟ್ಟು | 809.42 | 864.15 | 76.31 | 36.35 | 20.00 | 1806.35 | 1306.18 | 72.31% |

## ಕಾಮಗಾರಿಗಳ ವಿವರ (ಜುಲೈ 2021ರ ಅಂತ್ಯಕ್ಕೆ)

*ರೂ. ಕೋಟಿಗಳಲ್ಲಿ*

| ಕ್ರ.ಸಂ | ನಗರಗಳು | ಕಾಮಗಾರಿಗಳ ಸಂಖ್ಯೆ | | | | ಅನುಮೋದಿತ ಅನುದಾನ | | | | ಪೂರ್ಣಗೊಂಡ ಕಾಮಗಾರಿಗಳು | | | | ಬಿಡುಗಡೆಯಾದ ಅನುದಾನ | ಆರ್ಥಿಕ ಪ್ರಗತಿ | ಭೌತಿಕ ಪ್ರಗತಿ % |
|---|---|---|---|---|---|---|---|---|---|---|---|---|---|---|---|---|
| | | Parks | SWD | UT | ಒಟ್ಟು | Parks | SWD | UT | ಒಟ್ಟು | Parks | SWD | UT | ಒಟ್ಟು | | | |
| 1 | ಮಂಗಳೂರು | 4 | 1 | | 5 | 1.84 | 3.66 | | 5.5 | 4 | 1 | | 5 | 5.51 | 5.5 | 100% |
| 2 | ಕಲಬುರ್ಗಿ | 5 | | | 5 | 3.06 | | | 3.06 | 5 | | | 5 | 3.19 | 3.13 | 100% |
| 3 | ಮೈಸೂರು | 4 | | | 4 | 3.89 | | | 3.89 | 4 | | | 4 | 3.76 | 3.76 | 96.6% |
| 4 | ವಿಜಯಪುರ | 6 | | | 6 | 3.78 | | | 3.78 | 6 | | | 6 | 3.64 | 3.64 | 96.3% |
| 5 | ಬಳ್ಳಾರಿ | 3 | | | 3 | 2.27 | | | 2.27 | 3 | | | 3 | 2.25 | 2.02 | 88.9% |
| 6 | ಬೆಳಗಾವಿ | 3 | | | 3 | 4.33 | | | 4.33 | 3 | | | 3 | 3.68 | 3.68 | 84.9% |
| 7 | ದಾವಣಗೆರೆ | 9 | | | 9 | 4.82 | | | 4.82 | 9 | | | 9 | 4.08 | 4.06 | 84.2% |
| 8 | ತುಮಕೂರು | 12 | 4 | 16 | 32 | 5.24 | 5.71 | 15.23 | 26.18 | 12 | 4 | 16 | 32 | 19.79 | 19.14 | 73.1% |
| 9 | ಶಿವಮೊಗ್ಗ | 10 | 15 | | 25 | 3.59 | 68.47 | | 72.06 | 10 | 9 | | 19 | 56.48 | 47 | 65.2% |
| 10 | ಹುಬ್ಬಳ್ಳಿ-ಧಾರವಾಡ | 2 | | | 2 | 4.43 | | | 4.43 | 0 | | | 0 | 2.49 | 1.64 | 37.02% |
| | ಒಟ್ಟು= | 58 | 20 | 16 | 94 | 37.2 | 77.84 | 15.23 | 130.3 | 56 | 14 | 16 | 86 | 104.8 | 93.6 | 88.8% |

## ವಲಯವಾರು ಹಂಚಿಕೆ ಮತ್ತು ಆರ್ಥಿಕ ಪ್ರಗತಿ (ಜುಲೈ 2021 ರ ಅಂತ್ಯಕ್ಕೆ)

ರೂ. ಕೋಟಿಗಳಲ್ಲಿ

| ಕ್ರ.ಸಂ | ನಗರಗಳು | ವಲಯವಾರು ಹಂಚಿಕೆ: ಕುಡಿಯುವ ನೀರು ಸರಬರಾಜು | ಒಳಚರಂಡಿ | ಮಳೆ ನೀರು ಚರಂಡಿ | ಹಸಿರುಜಾಗ ಮತ್ತು ಉದ್ಯಾನವನಗಳ ಅಭಿವೃದ್ಧಿ | ನಗರ ಸಾರಿಗೆ | ಒಟ್ಟು ಹಂಚಿಕೆ | ಒಟ್ಟು ವೆಚ್ಚ ಜುಲೈ 2021ರ ಅಂತ್ಯಕ್ಕೆ | ಆರ್ಥಿಕ ಪ್ರಗತಿ % |
|---|---|---|---|---|---|---|---|---|---|
| 1 | ಬಾದಾಮಿ | 8.34 | 22.70 | 2.68 | 0.64 | 0.77 | 35.13 | 34.73 | 99% |
| 2 | ಬಾಗಲಕೋಟೆ | 83.60 | 17.48 | 5 | 3.37 | 5.00 | 114.45 | 74.76 | 65% |
| 3 | ಭದ್ರಾವತಿ | 68.03 | 45.00 | 36.00 | 4.00 | | 153.03 | 133.86 | 87% |
| 4 | ಬೀದರ್ | 173.79 | | | 3.20 | | 176.99 | 140.47 | 79% |
| 5 | ಚಿಕ್ಕಮಗಳೂರು | 105.57 | | 10.75 | 3.00 | | 119.32 | 111.75 | 94% |
| 6 | ಚಿತ್ರದುರ್ಗ | 112.00 | 6.60 | 18.97 | 3.00 | | 140.57 | 101.51 | 72% |
| 7 | ಗದಗ | 7 | 152.04 | 10 | 13.85 | 5.98 | 188.87 | 174.28 | 92% |
| 8 | ಗಂಗಾವತಿ | 25.00 | 53.43 | 20.00 | 2.35 | 10.14 | 110.92 | 85.32 | 78% |
| 9 | ಹಾಸನ | 140.28 | | | 2.00 | | 142.28 | 121.92 | 86% |
| 10 | ಹೊಸಪೇಟೆ | 52.00 | 106.64 | 7.00 | 4.00 | 6.00 | 175.64 | 109.52 | 62% |
| 11 | ಕೋಲಾರ | 17.23 | 73.00 | 40.07 | 7.75 | 0.40 | 138.45 | 104.81 | 76% |
| 12 | ಮಂಡ್ಯ | 123.40 | 13.50 | | 2.00 | | 138.90 | 135.90 | 98% |
| 13 | ರಾಯಚೂರು | 57.00 | 116.22 | | 3.20 | | 176.42 | 141.24 | 80% |
| 14 | ರಾಣೆಬೆನ್ನೂರು | 116.23 | | | 2.37 | | 118.60 | 118.45 | 100% |
| 15 | ಕೆ.ಜಿ.ಎಫ್ | 66.41 | 44.66 | 23 | 3.19 | 8.00 | 145.26 | 106.41 | 73% |
| 16 | ಉಡುಪಿ | 131.53 | | | 1.00 | | 132.53 | 78.52 | 59% |
| | ಒಟ್ಟು= | 1287.41 | 651.27 | 173.47 | 58.92 | 36.29 | 2207.36 | 1774.46 | 80% |

## ಕಾಮಗಾರಿಗಳ ವಿವರ (ಜುಲೈ 2021 ರ ಅಂತ್ಯಕ್ಕೆ)

ರೂ. ಕೋಟಿಗಳಲ್ಲಿ

| ಕ್ರ.ಸಂ | ನಗರಗಳು | ಅನುಮೋದಿತ ಕಾಮಗಾರಿಗಳ ಸಂಖ್ಯೆ | | | | ಅನುಮೋದಿತ ಅನುದಾನ | | | | ಪೂರ್ಣಗೊಂಡ ಕಾಮಗಾರಿಗಳು | | | | ಬಿಡುಗಡೆಯಾದ ಅನುದಾನ | ಆರ್ಥಿಕ ಪ್ರಗತಿ | ಆರ್ಥಿಕ ಪ್ರಗತಿ % |
|---|---|---|---|---|---|---|---|---|---|---|---|---|---|---|---|---|
| | | Parks | SWD | UT | ಒಟ್ಟು | Parks | SWD | UT | ಒಟ್ಟು | Parks | SWD | UT | ಒಟ್ಟು | | | |
| 1 | ಬಾದಾಮಿ | 2 | 4 | 1 | 7 | 0.57 | 2.54 | 0.73 | 3.84 | 2 | 4 | 1 | 7 | 3.78 | 3.77 | 100% |
| 2 | ಬಾಗಲಕೋಟೆ | 13 | 5 | 6 | 24 | 3.01 | 4.06 | 4.51 | 11.58 | 13 | 5 | 6 | 24 | 13.19 | 12.98 | 98% |
| 3 | ಭದ್ರಾವತಿ | 6 | 2 | | 8 | 4.07 | 35.17 | | 39.24 | 5 | 2 | | 7 | 37.35 | 36.93 | 99% |
| 4 | ಬೀದರ್ | 5 | | | 5 | 3.02 | | | 3.02 | 4 | | | 4 | 2.26 | 2.26 | 100% |
| 5 | ಚಿಕ್ಕಮಗಳೂರು | 4 | 5 | | 9 | 2.96 | 9.98 | | 12.94 | 3 | 4 | | 7 | 11.31 | 10.93 | 97% |
| 6 | ಚಿತ್ರದುರ್ಗ | 5 | 7 | | 12 | 2.89 | 19.39 | | 22.28 | 5 | 7 | | 12 | 20.00 | 18.74 | 94% |
| 7 | ಗದಗ | 13 | 1 | 2 | 16 | 13.54 | 9.25 | 5.6 | 28.39 | 12 | 0 | 2 | 14 | 15.48 | 14.58 | 94% |
| 8 | ಗಂಗಾವತಿ | 7 | 5 | 6 | 18 | 2.25 | 19.86 | 10.14 | 32.25 | 7 | 4 | 2 | 13 | 19.10 | 18.60 | 97% |
| 9 | ಹಾಸನ | 6 | | | 6 | 1.8 | | | 1.8 | 6 | | | 6 | 1.71 | 1.78 | 100% |
| 10 | ಹೊಸಪೇಟೆ | 4 | 5 | 3 | 12 | 3.88 | 6.87 | 6.12 | 16.87 | 4 | 5 | 2 | 11 | 14.51 | 14.11 | 97% |
| 11 | ಕೋಲಾರ | 12 | 19 | 1 | 32 | 6.98 | 37.86 | 0.42 | 45.26 | 12 | 16 | 0 | 28 | 33.93 | 33.58 | 99% |
| 12 | ಮಂಡ್ಯ | 6 | | | 6 | 1.72 | | | 1.72 | 6 | | | 6 | 1.99 | 1.72 | 86% |
| 13 | ರಾಯಚೂರು | 7 | | | 7 | 3.18 | | | 3.18 | 7 | | | 7 | 3.07 | 3.07 | 100% |
| 14 | ರಾಣೆಬೆನ್ನೂರು | 9 | | | 9 | 2.21 | | | 2.21 | 9 | | | 9 | 2.26 | 2.10 | 93% |
| 15 | ಕೆ.ಜಿ.ಎಫ್ | 10 | 11 | 8 | 29 | 2.8 | 20.58 | 6.9 | 30.28 | 9 | 10 | 3 | 22 | 25.04 | 24.84 | 99% |
| 16 | ಉಡುಪಿ | 4 | | | 4 | 0.98 | | | 0.98 | 4 | | | 4 | 0.99 | 0.95 | 96% |
| | ಒಟ್ಟು= | 113 | 64 | 27 | 204 | 55.86 | 165.56 | 34.42 | 255.84 | 108 | 57 | 16 | 181 | 206.00 | 200.94 | 98% |